## ಬುತ್ತಿ ಚಿಗುರು

### ಸೇರಿಸಿದ್ದು...

ನಾಗರಾಜನ ಮಗ ರಮೇಶ ಲೆಕ್ಕದಲ್ಲಿ ಬಹಳ ಹಿಂದಿದ್ದ. ಅಂದು ರಮೇಶ ಅಪ್ಪನಿಗೆ ತನ್ನ ಅಂಕ ಪಟ್ಟಿಯನ್ನು ಕೊಟ್ಟು ಸಹಿ ಹಾಕಲು ಹೇಳಿದ. ನೋಡಿದರೆ ಲೆಕ್ಕದಲ್ಲಿ ಅವನಿಗೆ 90 ಅಂಕಗಳು! ನಾಗರಾಜನಿಗೆ ಆಶ್ಚರ್ಯ ಮತ್ತು ಅನುಮಾನ. ಯಾವಾಗಲೂ ಲೆಕ್ಕದಲ್ಲಿ 10ರ ಮೇಲೆ ತೆಗೆಯದಿದ್ದವನು ಈಗ 90 ಅಂಕಗಳನ್ನು ತೆಗೆದಿದ್ದಾನೆ ಎಂದರೆ ಏನೊ ಮಾಡಿದ್ದಾನೆ ಎಂದು ತರಾಟೆಗೆ ತೆಗೆದುಕೊಂಡ. 'ನಿಜ ಹೇಳು, ಏನು ಮಾಡಿದ್ದೀಯ? ನೀನು ತೆಗೆದಿರುವ 9 ಅಂಕಕ್ಕೆ '0' ಸೇರಿಸಿದ್ದೀಯಾ. ನಿಜ ತಾನೆ?' ಎಂದ. ರಮೇಶ ತಡವರಿಸುತ್ತ, 'ಅಯ್ಯೋ ಇಲ್ಲ ಅಪ್ಪ, ನನ್ನ ನಂಬಿ. ದೇವರಾಣೆಗೂ ನಾನು '0' ಸೇರಿಸಿಲ್ಲ. ನಾನು ಸೇರಿಸಿದ್ದು '9' ಎಂದ.

**ಎಂ.ಕೆ. ಮಂಜುನಾಥ್**





### ಅತ್ಯವಸರ ಲೋಪವಾಗುತ್ತದೆ...

ಹೊಸದಾಗಿ ಮದುವೆಯಾಗಿ ಬಂದ ಸೊಸೆ ಪದ್ಮಾವತಿಗೆ ಅತ್ತೆ ಮೀನಾಕ್ಷಮ್ಮ ಹೇಳಿದರು, 'ಪದ್ದೂ... ಎಲ್ಲದಕ್ಕೂ ಅತ್ಯವಸರದ ನಿರ್ಧಾರ ಸಲ್ಲದು. ಅದು ಲೋಪವಾಗುತ್ತದೆ. ಯಾವುದೇ ವಿಚಾರವಾದರೂ ಸರಿ, ಮೊದಲು ಯೋಚನೆ ಮಾಡಿ, ನಂತರ ನಿರ್ಧಾರ ಮಾಡಬೇಕು' ಎಂದು. ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದ ಪದ್ಮಾವತಿ, 'ಅತ್ತೆ, ಅತ್ಯವಸರ ಲೋಪ ಹೇಗಾಗುತ್ತದೆ? ಅತಿ+ಅವಸರ=ಅತ್ಯವಸರ, ಇದು ಯಣ್ ಸಂಧಿ. ಲೋಪ ಸಂಧಿ ಅಲ್ಲ, ಬೇಕಿದ್ರೆ ನನ್ನ ಗೈಡ್‌ಗೆ ಕೇಳಿ...' ಎಂದು ಪೆಚ್ಚುಪೆಚ್ಚಾಗಿ ನುಡಿದಾಗ ಸೊಸೆಯ ಅತಿ ಬುದ್ಧವಂತಿಕೆಗೆ ಅತ್ತೆ ಬೆಚ್ಚಿ ಬಿದ್ದಳು.

**ಶೈಲಜಾ ಕೇಕಣಾಜೆ**